EGT-P-KND

ಕನ್ನಡ / KANNADA

ಪತ್ರಿಕೆ I / Paper I

(ಸಾಹಿತ್ಯ) / (LITERATURE)

ವೇಳೆ : **ಮೂರು** ಗಂಟೆ *Time Allowed : **Three** Hours*	ಗರಿಷ್ಠ ಅಂಕಗಳು : **250** *Maximum Marks : **250***

ಪ್ರಶ್ನೆ ಪತ್ರಿಕೆ ವಿಶೇಷ ಸೂಚನೆಗಳು

ದಯವಿಟ್ಟು ಪ್ರಶ್ನೆಗಳಿಗೆ ಉತ್ತರಿಸುವ ಮೊದಲು ಕೆಳಗಿನ ಪ್ರತಿಯೊಂದು ಸೂಚನೆಗಳನ್ನು ಸರಿಯಾಗಿ ಓದಿರಿ :

ಇದರಲ್ಲಿ **ಎಂಟು** ಪ್ರಶ್ನೆಗಳಿದ್ದು **ಎರಡು** ಭಾಗಗಳಲ್ಲಿ ವಿಂಗಡಿಸಲಾಗಿದೆ.

ಅಭ್ಯರ್ಥಿಗಳು ಎಲ್ಲಾ ಪ್ರಶ್ನೆಗಳಲ್ಲಿ **ಐದು** ಪ್ರಶ್ನೆಗಳಿಗೆ ಉತ್ತರಿಸಬೇಕು.

ಅಭ್ಯರ್ಥಿಗಳು ಪ್ರಶ್ನೆಗಳ ಸಂಖ್ಯೆ **1** ಮತ್ತು **5**ಕ್ಕೆ ಉತ್ತರಿಸುವುದು ಕಡ್ಡಾಯ, ಮತ್ತು ಇನ್ನುಳಿದ **ಮೂರು** ಪ್ರಶ್ನೆಗಳಲ್ಲಿ ಪ್ರತಿಯೊಂದು ವಿಭಾಗದಿಂದ ಕನಿಷ್ಠ **ಒಂದು** ಪ್ರಶ್ನೆಗಾದರೂ ಉತ್ತರಿಸಬೇಕು.

ಪ್ರತಿಯೊಂದು ಪ್ರಶ್ನೆಗಳಿಗಿರುವ ಅಂಕಗಳನ್ನು ಅಯಾ ಪ್ರಶ್ನೆಗಳ ಮುಂದೆಯೇ ನಮೂದಿಸಲಾಗಿದೆ.

ಉತ್ತರಗಳನ್ನು ಅತ್ಯಗತ್ಯವಾಗಿ ***ಕನ್ನಡದಲ್ಲೇ (ಕನ್ನಡ ಲಿಪಿಯಲ್ಲೇ)*** ಬರೆಯಬೇಕು.

ಕೆಲವು ಪ್ರಶ್ನೆಗಳಿಗೆ ಉತ್ತರಿಸಲು ನಿರ್ದಿಷ್ಟಪಡಿಸಿದ ಶಬ್ದಗಳ ಮಿತಿಯನ್ನು ಸರಿಯಾಗಿ ಪಾಲಿಸಬೇಕು.

ಉತ್ತರಿಸಿದ ಪ್ರಶ್ನೆಗಳನ್ನು ಕ್ರಮಬದ್ಧವಾಗಿ ಪರಿಗಣಿಸಿ ಎಣಿಕೆ ಮಾಡಲಾಗುವುದು. ಅಪೂರ್ಣ ಉತ್ತರಗಳನ್ನು ಹೊಡೆದು ಹಾಕದಿದ್ದಲ್ಲಿ ಅವುಗಳನ್ನು ಎಣಿಕೆಯಲ್ಲಿ ಪರಿಗಣಿಸಲಾಗುತ್ತದೆ. ಪ್ರಶ್ನೋತ್ತರ ಸಹಿತವಾಗಿರುವ ಪುಸ್ತಿಕೆಯಲ್ಲಿ ಬರೆಯದೆ ಉಳಿದ ಪೂರ್ಣ ಖಾಲಿ ಪುಟಗಳನ್ನು ಮತ್ತು ಭಾಗಶಃ ಖಾಲಿ ಇರುವ ಪುಟಗಳನ್ನು ಸ್ಪಷ್ಟವಾಗಿ ಹೊಡೆದು ಹಾಕಬೇಕು.

Question Paper Specific Instructions

Please read each of the following instructions carefully before attempting questions :

*There are **EIGHT** questions divided in **TWO SECTIONS**.*

*Candidate has to attempt **FIVE** questions in all.*

*Question nos. **1** and **5** are compulsory and out of the remaining, any **THREE** are to be attempted choosing at least **ONE** question from each section.*

The number of marks carried by a question / part is indicated against it.

*Answers must be written in **KANNADA (Kannada script)**.*

Word limit in questions, wherever specified, should be adhered to.

Attempts of questions shall be counted in sequential order. Unless struck off, attempt of a question shall be counted even if attempted partly. Any page or portion of the page left blank in the Question-cum-Answer Booklet must be clearly struck off.

Optional Province · optionalprovince.com

SECTION A

Q1. ಕೆಳಗೆ ಕೊಟ್ಟಿರುವ ವಿಷಯಗಳನ್ನು ಕುರಿತು ಟಿಪ್ಪಣಿ ಬರೆಯಿರಿ. ಪ್ರತಿಯೊಂದು ಟಿಪ್ಪಣಿ 150 ಶಬ್ದಗಳಿಗೆ ಮೀರದಂತೆ ಇರಬೇಕು. ಪ್ರತಿ ಉಪಪ್ರಶ್ನೆಗೆ 10 ಅಂಕಗಳು. *10×5=50*

(a) ಕನ್ನಡ ಭಾಷೆಯ ವಿವಿಧ ಘಟ್ಟಗಳು *10*

(b) ಮಾರ್ಗ–ದೇಸಿ ಪರಿಕಲ್ಪನೆ *10*

(c) ಪಂಪನ ಆದಿಪುರಾಣದ ಬಾಹುಬಲಿಯ ಸಂವಾದ *10*

(d) ವಚನ ಮತ್ತು ಕೀರ್ತನೆಗಳ ಸಾಮಾನ್ಯ ಸ್ವರೂಪ *10*

(e) ಕನ್ನಡ ನವೋದಯ ಹಾಗೂ ನವ್ಯಕಾವ್ಯಗಳ ತಾತ್ವಿಕ ನೆಲೆಗಳು *10*

Q2. (a) ಕನ್ನಡ ಭಾಷೆಯ ಚಾರಿತ್ರಿಕ ಬೆಳವಣಿಗೆಯಲ್ಲಿ ಕಂಡು ಬರುವ ಧ್ವನಿ ಬದಲಾವಣೆಗಳನ್ನು ಗುರುತಿಸಿ. *15*

(b) ಕನ್ನಡ ಸಾಹಿತ್ಯ ಪರಂಪರೆಯ ಮೂಲ ಪ್ರೇರಣೆಗಳಾವವು ? ವಿವರಿಸಿ. *15*

(c) ಭರತೇಶ ವೈಭವ ಸಾರುವ ಆಧ್ಯಾತ್ಮದ ಪರಿಕಲ್ಪನೆಯನ್ನು ವಿವರಿಸಿ. *10*

(d) ಪರಂಪರೆ ಮತ್ತು ಆಧುನಿಕತೆಗಳ ಸಂಘರ್ಷ ಚೋಮನದುಡಿ ಕಾದಂಬರಿಯಲ್ಲಿ ಹೇಗೆ ವ್ಯಕ್ತವಾಗಿದೆ ? ಚರ್ಚಿಸಿ. *10*

Q3. (a) ಕನ್ನಡದ ಅವಸ್ಥಾಭೇದಗಳಾವವು ? ಸಮಾಲೋಚಿಸಿ. *15*

(b) ದಾಸ ಸಾಹಿತ್ಯದಲ್ಲಿ ಅಭಿವ್ಯಕ್ತಗೊಂಡಿರುವ ಸಾಮಾಜಿಕ ಧೋರಣೆಗಳನ್ನು ನಿದರ್ಶನಗಳೊಂದಿಗೆ ಪರಾಮರ್ಶಿಸಿ. *15*

(c) ಕನ್ನಡದಲ್ಲಿ ನವೋದಯ ಕಾವ್ಯ ಬೆಳೆದುಬಂದ ಬಗೆಯನ್ನು ಸಾಧಾರವಾಗಿ ವಿವರಿಸಿ. *10*

(d) ಕನ್ನಡದ ಪ್ರಮುಖ ಅಸಂಗತ ನಾಟಕಗಳ ವೈಶಿಷ್ಟ್ಯಗಳನ್ನು ಬರೆಯಿರಿ. *10*

Optional Province · optionalprovince.com

Q4. (a) ಕನ್ನಡ ಭಾಷೆಯ ಮೇಲಾದ ಅನ್ಯಭಾಷೆಗಳ ಪ್ರಭಾವವನ್ನು ಸಾಧಾರವಾಗಿ ನಿರೂಪಿಸಿ. *15*

(b) ಧರ್ಮಾಮೃತ ಕಾವ್ಯದಲ್ಲಿ ಪ್ರತಿಪಾದನೆಗೊಂಡಿರುವ ದೇಸಿಯತೆಯನ್ನು ಕುರಿತು ಚರ್ಚಿಸಿ. *15*

(c) ದಲಿತ-ಬಂಡಾಯ ಕಾವ್ಯದ ಸಾಮಾಜಿಕ ಪ್ರಸ್ತುತತೆಯನ್ನು ಪರಾಮರ್ಶಿಸಿ. *10*

(d) ಜೀವನ ಚರಿತ್ರೆಗಳು ಆಧುನಿಕ ಕನ್ನಡ ಸಾಹಿತ್ಯದ ಗದ್ಯ ಪ್ರಕಾರವಾಗಿ ಹೇಗೆ ಮೂಡಿ ಬಂದಿವೆ ? ವಿವರಿಸಿ. *10*

Optional Province · optionalprovince.com

SECTION B

Q5. ಕೆಳಗೆ ಕೊಟ್ಟಿರುವ ವಿಷಯಗಳನ್ನು ಕುರಿತು ಟಿಪ್ಪಣಿ ಬರೆಯಿರಿ. ಪ್ರತಿಯೊಂದು ಟಿಪ್ಪಣಿ 150 ಪದಗಳಿಗೆ ಮೀರದಂತೆ ಇರಬೇಕು. *10×5=50*

(a) ಕಾವ್ಯದ ಔಚಿತ್ಯ ಮತ್ತು ಪ್ರಯೋಜನಗಳು *10*

(b) ರೀತಿ–ಮಾರ್ಗ–ಶೈಲಿ *10*

(c) ಕರ್ನಾಟಕ ಏಕೀಕರಣ ಚಳುವಳಿಯ ಪ್ರಮುಖ ಧೋರಣೆಗಳು *10*

(d) ಪ್ರಾಚೀನ ಜೈನ ಧಾರ್ಮಿಕ ಕೇಂದ್ರಗಳು *10*

(e) ಚಾಲುಕ್ಯರ ಕಾಲದ ವಾಸ್ತುಶಿಲ್ಪಗಳ ನೆಲೆಗಳು *10*

Q6. (a) ಕಾವ್ಯದಲ್ಲಿ ಅಲಂಕಾರದ ಔಚಿತ್ಯ ಕುರಿತು ವಿವಿಧ ಅಲಂಕಾರಿಕರ ಹಿನ್ನಲೆಯಲ್ಲಿ ಸಮಾಲೋಚಿಸಿ. *15*

(b) ಕರ್ನಾಟಕದ ಪ್ರಮುಖ ಧರ್ಮಗಳು ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗೆ ನೀಡಿರುವ ಕೊಡುಗೆಗಳನ್ನು ನಿರೂಪಿಸಿ. *15*

(c) ರೀತಿ ಪ್ರಸ್ಥಾನದ ಪರಿಕಲ್ಪನೆ ಹಾಗೂ ಅದರ ಬೆಳವಣಿಗೆ ಕುರಿತು ವಿವರಿಸಿ. *10*

(d) ರಾಜಾಶ್ರಯದಲ್ಲಿ ಬೆಳೆದು ಬಂದ ಕರ್ನಾಟಕದ ಚಿತ್ರಕಲೆಯನ್ನು ವಿಶ್ಲೇಷಿಸಿ. *10*

Q7. (a) ಸಾಹಿತ್ಯ ಮೀಮಾಂಸೆ ಮತ್ತು ವಿಮರ್ಶೆಗಳ ನಡುವಿನ ಸಂಬಂಧಾಂತರಗಳನ್ನು ಗುರುತಿಸಿ. *15*

(b) ಭರತನ ರಸ ಸಿದ್ಧಾಂತವನ್ನು ವಿವರಿಸಿ ಆ ಕುರಿತು ನಡೆದಿರುವ ಚರ್ಚೆಯನ್ನು ಪರಾಮರ್ಶಿಸಿ. *15*

(c) ರಾಷ್ಟ್ರಕೂಟರ ಕಾಲದ ಸಾಹಿತ್ಯ ಮತ್ತು ಸಂಸ್ಕೃತಿಯ ಸಂವರ್ಧನೆ ಕುರಿತು ವಿವೇಚಿಸಿ. *10*

(d) ಕರ್ನಾಟಕ ಸಂಸ್ಕೃತಿಯ ವಿಶಿಷ್ಟತೆಗಳನ್ನು ನಿರೂಪಿಸಿ. *10*

Optional Province · optionalprovince.com

Q8. (a) ಪ್ರಾಯೋಗಿಕ ಮತ್ತು ತೌಲನಿಕ ವಿಮರ್ಶೆಯ ಸ್ವರೂಪ ಸಂಬಂಧ ಹಾಗೂ ಪ್ರಯೋಜನಗಳನ್ನು – ವಿವರಿಸಿ. *15*

(b) ಕಾವ್ಯದ ಅಭಿವ್ಯಕ್ತಿ, ಪರಿಕರ ಹಾಗೂ ಸ್ವರೂಪಗಳನ್ನು ಕಾವ್ಯ ಮೀಮಾಂಸಕರ ಅಭಿಪ್ರಾಯಗಳ ಹಿನ್ನಲೆಯಲ್ಲಿ ಪರಾಮರ್ಶಿಸಿ. *15*

(c) ಕರ್ನಾಟಕದ ಶಿಲ್ಪಕಲೆಯ ವೈಭವ ಮತ್ತು ವೈವಿಧ್ಯತೆಗಳನ್ನು ವಿವರಿಸಿ. *10*

(d) ಪ್ರಾಚೀನ ಕಾಲದ ಶಿಕ್ಷಣ ಹಾಗೂ ಆಡಳಿತ ಪದ್ಧತಿಯ ಸ್ವರೂಪವನ್ನು ವಿವೇಚಿಸಿ. *10*

Optional Province · optionalprovince.com